392

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿನ ಎಲ್ಲಾ ಅಂಗೀಕೃತ ವಾಣಿಜ್ಯ ಶಾಲೆಗಳಲ್ಲಿ ಬೆರಳಚ್ಚಿನ ಜೊತೆಗೆ ಗಣಕಯಂತ್ರ ಶಿಕ್ಷಣ ಪ್ರಾರಂಭಿಸುವ ಬಗ್ಗೆ

ಓದಲಾಗಿದೆ:

1) ಕರ್ನಾಟಕ ರಾಜ್ಯ ವಾಣಿಜ್ಯ ವಿದ್ಯಾಶಾಲೆಗಳ ಸಂಘ ಬೆಂಗಳೂರು ಇವರ ಪತ್ರ ದಿನಾಂಕ: 23-01-2001 ಮತ್ತು 30-01-2001

2) ನಿರ್ದೇಶಕರು ಪ್ರೌಢ ಶಿಕ್ಷಣ ಇವರ ದಿನಾಂಕ: 03-02-2006ರ ಪತ್ರ ಸಂಖ್ಯೆ: ವಶಿ/01/ವಶಿ/ಕಂಪ್ಯೂ./ಪಿ/ಪ/ಪತ್ರ/04/04-05

**ಪ್ರಸ್ತಾವನೆ:**

1) ಮೇಲೆ ಓದಲಾದ (1)ರಲ್ಲಿ ಕರ್ನಾಟಕ ರಾಜ್ಯ ವಾಣಿಜ್ಯ ವಿದ್ಯಾಶಾಲೆಗಳ ಸಂಘ ಬೆಂಗಳೂರು, ಇವರ ಮನವಿ ಪತ್ರಗಳಲ್ಲಿ ಇತ್ತೀಚೆಗೆ ಎಲ್ಲಾ ರಂಗಗಳಲ್ಲಿಯೂ ಬೆರಳಚ್ಚು ಶಿಕ್ಷಣದ ಜೊತೆಗೆ ಕಂಪ್ಯೂಟರ್ ಶಿಕ್ಷಣವನ್ನು ಅಳವಡಿಸಿಕೊಂಡಿರುವ ಕಾರಣ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಕಛೇರಿಗಳಲ್ಲಿ, ಬ್ಯಾಂಕ್‌ಗಳಲ್ಲಿ ಮತ್ತು ಅರೆಸರ್ಕಾರಿ ಕಛೇರಿಗಳಲ್ಲಿ ಬೆರಳಚ್ಚು ಜೊತೆಗೆ ಕಂಪ್ಯೂಟರ್ ಜ್ಞಾನವನ್ನು ಸಹ ಅಳವಡಿಸಿಕೊಳ್ಳುವುದು ಅತ್ಯಗತ್ಯವೆಂದು ವಿವರಿಸಿ ಸಂಸ್ಥೆಗಳಲ್ಲಿ ಕೆಲಸ ಕಾರ್ಯಗಳು ಸುಗಮವಾಗಿ ನಡೆಸಲು ಸಹಾಯವಾಗುತ್ತದೆ ಎಂದು ಮತ್ತು ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಆರ್ಥಿಕ ಹೊರೆ ಬೀಳುವುದಿಲ್ಲ ಹಾಗೂ ಗ್ರಾಮಾಂತರ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಜ್ಞಾನ ಕಲಿಸಲು ಸಹಾಯವಾಗುತ್ತದೆ ಎಂದು ತಿಳಿಸಿ ವಾಣಿಜ್ಯ ಶಿಕ್ಷಣ ಕೋರ್ಸುಗಳ ಜೊತೆಗೆ ಕಂಪ್ಯೂಟರ್ ಶಿಕ್ಷಣವನ್ನು ಅಳವಡಿಸಿಕೊಳ್ಳಲು ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

2) ಮೇಲೆ ಓದಲಾದ (2)ರಲ್ಲಿ ಪ್ರೌಢ ಶಿಕ್ಷಣ ನಿರ್ದೇಶಕರ ಪತ್ರದಲ್ಲಿ, ರಾಜ್ಯದಲ್ಲಿನ ಎಲ್ಲಾ ಅಂಗೀಕೃತ ವಾಣಿಜ್ಯ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಪ್ರಾರಂಭಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಶಿಫಾರಸ್ಸು ಮಾಡಿರುತ್ತಾರೆ ಹಾಗೂ ವಾಣಿಜ್ಯ ಶಿಕ್ಷಣ ಶಾಲೆಗಳಲ್ಲಿ ಬೆರಳಚ್ಚು ಹಾಗೂ ಶೀಘ್ರಲಿಪಿ ಶಿಕ್ಷಣದ ಜೊತೆಗೆ ಕಂಪ್ಯೂಟರ್ ಶಿಕ್ಷಣ ಅಳವಡಿಸುವುದು ಸೂಕ್ತವೆಂದು ಅಭಿಪ್ರಾಯಿಸಿ ಕರ್ನಾಟಕ ಶಿಕ್ಷಣ ಅಧಿನಿಯಮ 1983 (ಕರ್ನಾಟಕ ಅಧಿನಿಯಮ1-1995)ರ ಸೆಕ್ಷನ್ 2 ಸಬ್‌ಸೆಕ್ಷನ್(8) ರನ್ವಯ ಆದೇಶ ಹೊರಡಿಸಲು ಕೋರಿರುತ್ತಾರೆ.

3) ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 02 ಎಲ್‌ಸಿಇ 2006, ಬೆಂಗಳೂರು,**
**ದಿನಾಂಕ: 30ನೇ ಡಿಸೆಂಬರ್ 2006**

4) ರಾಜ್ಯದಲ್ಲಿನ ಎಲ್ಲಾ ಅಂಗೀಕೃತ ವಾಣಿಜ್ಯ ಶಾಲೆಗಳಲ್ಲಿ ಪ್ರಸ್ತುತ ನಡೆಸಲಾಗುತ್ತಿರುವ ಬೆರಳಚ್ಚು/ಶೀಘ್ರಲಿಪಿ ಜೊತೆಗೆ ಕಂಪ್ಯೂಟರ್ ಶಿಕ್ಷಣ

US ADI

ಅಳವಡಿಸಿಕೊಳ್ಳಲು ಕರ್ನಾಟಕ ಶಿಕ್ಷಣ ಅಧಿನಿಯಮ 1983ರ ಸೆಕ್ಷನ್2(8)ರಡಿಯಲ್ಲಿ ರಾಜ್ಯದಲ್ಲಿನ ಎಲ್ಲಾ ಅಂಗೀಕೃತ ವಾಣಿಜ್ಯ ಶಾಲೆಗಳಲ್ಲಿ ಬೆರಳಚ್ಚು ಹಾಗೂ ಶೀಘ್ರಲಿಪಿ ಜೊತೆ ಕಂಪ್ಯೂಟರ್ ಶಿಕ್ಷಣವನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪ್ರಾರಂಭಿಸಲು ಸರ್ಕಾರವು ಆದೇಶಿಸಿದೆ.

ಅ) ಕಂಪ್ಯೂಟರ್ ಶಿಕ್ಷಣ ಪ್ರಾರಂಭಿಸಲು ಆಯಾಯ ವಾಣಿಜ್ಯ ಶಿಕ್ಷಣ ಶಾಲೆಗಳು ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯಕ್ಕೆ ಬೇಡಿಕೆಯನ್ನು ಸಲ್ಲಿಸದೆ ನಡೆಸತಕ್ಕದು;

ಆ) ಕಂಪ್ಯೂಟರ್ ಶಿಕ್ಷಣ ಅಳವಡಿಸಿಕೊಳ್ಳಲು ವಾಣಿಜ್ಯ ಶಾಲೆಗಳು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದತಕ್ಕದ್ದು;

ಇ) ಕಂಪ್ಯೂಟರ್ ಶಿಕ್ಷಣ ಬೋಧಿಸಲು ಸೂಕ್ತ ವಿದ್ಯಾರ್ಹತೆ ಹೊಂದಿರತಕ್ಕ ಬೋಧಕರನ್ನು ಹೊಂದಿರತಕ್ಕದ್ದು; ಹಾಗೂ

ಈ) ಸರ್ಕಾರವು ವಾಣಿಜ್ಯ ಶಿಕ್ಷಣ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಅಳವಡಿಸಿಕೊಳ್ಳುವ ಸಂಬಂಧ ಸರ್ಕಾರವು ನಿಗದಿಪಡಿಸುವ ಎಲ್ಲಾ ಷರತ್ತುಗಳನ್ನು ತಪ್ಪದೇ ಪೂರೈಸತಕ್ಕದ್ದು.

5) ಮೇಲ್ಕಂಡ ಕಂಪ್ಯೂಟರ್ ಶಿಕ್ಷಣದ ಪರೀಕ್ಷೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವತಿಯಿಂದ ನಡೆಸಲು ಸಹಾ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎನ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

**ಪ್ರತಿಗಳು:**

1) ಸಂಕಲನಕಾರರು ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇದನ್ನು ದಿನಾಂಕ: 02-01-2007ರ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ 500 ಪ್ರತಿಗಳನ್ನು ಶಿಕ್ಷಣ ಇಲಾಖೆ ಸೇವೆಗಳು-3 ಶಾಖೆಗೆ ಕಳುಹಿಸಿಕೊಡಲು ಕೋರಲಾಗಿದೆ.
2) ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3) ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
4) ನಿರ್ದೇಶಕರು, ಪ್ರೌಢ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
5) ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು
6) ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಾಣಿಜ್ಯ ವಿದ್ಯಾಶಾಲೆಗಳ ಸಂಘ, ವಿಜಯಲಕ್ಷ್ಮಿ ಅಪಾರ್ಟ್‌ಮೆಂಟ್ ನಂ.20, ಜಿ-ಎ, 5ನೇ ಅಡ್ಡರಸ್ತೆ, ಮಹಾಮಡಪ್ ಬ್ಲಾಕ್ ಮಲ್ಲೇಶ್ವರಂ, ಬೆಂಗಳೂರು-56003.
7) ಶಿಕ್ಷಣ ಇಲಾಖೆಯ ಎಲ್ಲಾ ಅಧೀನ ಕಾರ್ಯದರ್ಶಿಗಳು ಮತ್ತು ಶಾಖಾಧಿಕಾರಿಗಳಿಗೆ
8) ಶಾಖಾ ರಕ್ಷಾ ಕಡತ.
9) ಹೆಚ್ಚುವರಿ ಪ್ರತಿಗಳು.

US ADU

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ವಾಣಿಜ್ಯ ಶಾಲೆಗಳಲ್ಲಿ ವಾಣಿಜ್ಯ ಶಿಕ್ಷಣದ ಜೊತೆಯಲ್ಲಿ ಗಣಕ ಯಂತ್ರ ಶಿಕ್ಷಣ ಪ್ರಾರಂಭಿಸಲು ಪಠ್ಯಾವಳಿ ಅನುಮೋದನೆ ಬಗ್ಗೆ.

**ಓದಲಾಗಿದೆ:-** 1) ಸರ್ಕಾರದ ಆದೇಶ ಸಂಖ್ಯೆ:ಇಡಿ 02 ಎಲ್‌ಸಿಇ 2006, ದಿನಾಂಕ:30-12-2006.

2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರ ಪತ್ರ ಸಂಖ್ಯೆ: ವಾ.ಶಿ1/ಇತರೆ/ವಾ.ಶಿ.ಮಂ3/2006-07, ದಿನಾಂಕ:06.02.2008.

* * * *

ಪ್ರ ಸ್ತಾ ವ ನೆ:

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿನ ಎಲ್ಲಾ ಅಂಗೀಕೃತ ವಾಣಿಜ್ಯ ಶಾಲೆಗಳಲ್ಲಿ ಪ್ರಸ್ತುತ ನಡೆಸಲಾಗುತ್ತಿರುವ ಬೆರಳಚ್ಚು/ಶೀಘ್ರಲಿಪಿ ಜೊತೆಗೆ ಕಂಪ್ಯೂಟರ್ ಶಿಕ್ಷಣ ಅಳವಡಿಸಿಕೊಳ್ಳಲು ಆದೇಶಿಸಿದೆ ಮತ್ತು ಕಂಪ್ಯೂಟರ್ ಶಿಕ್ಷಣದ ಪರೀಕ್ಷೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವತಿಯಿಂದ ನಡೆಸಲು ಸಹಾ ಆದೇಶಿಸಿದೆ.

ಮೇಲ್ಕಂಡ ಆದೇಶದ ಹಿನ್ನೆಲೆಯಲ್ಲಿ ಮೇಲೆ ಓದಲಾದ (2)ರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಪಠ್ಯಾವಳಿ ಸಮಿತಿಯವರು ತಯಾರಿಸಿ ಸಲ್ಲಿಸಿದ ಗಣಕ ಯಂತ್ರ ಶಿಕ್ಷಣ ಸಿಲಬಸ್ ಮತ್ತು ಪಠ್ಯಕ್ರಮವನ್ನು ಸರ್ಕಾರಕ್ಕೆ ಸಲ್ಲಿಸಿ, ಸದರಿ ಪಠ್ಯಾವಳಿಯನ್ನು ಜಾರಿಗೆ ತರಲು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 38 ಎಲ್‌ಸಿಇ 2008, ಬೆಂಗಳೂರು, ದಿನಾಂಕ:10-02-2009.**

ರಾಜ್ಯದಲ್ಲಿನ ಎಲ್ಲಾ ಅಂಗೀಕೃತ ವಾಣಿಜ್ಯ ಶಾಲೆಗಳಲ್ಲಿ ಗಣಕ ಯಂತ್ರ ಶಿಕ್ಷಣ ಪ್ರಾರಂಭಿಸುವ ಸಲುವಾಗಿ ಪಠ್ಯಾವಳಿ ಸಮಿತಿಯು ತಯಾರಿಸಿರುವ ಗಣಕ ಯಂತ್ರ ಶಿಕ್ಷಣ ಸಿಲಬಸ್ ಮತ್ತು ಪಠ್ಯಕ್ರಮವನ್ನು ಸರ್ಕಾರವು ಅನುಮೋದಿಸಿ ಆದೇಶಿಸಿದೆ. ಹಾಗೂ ಗಣಕ ಯಂತ್ರ ಶಿಕ್ಷಣದ

\103



ಪರೀಕ್ಷೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವತಿಯಿಂದ ನಡೆಸಲು ಸಹ ಈ ಮೂಲಕ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ಎನ್. ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ
10/2/09 ಶಿಕ್ಷಣ ಇಲಾಖೆ.

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇದನ್ನು ದಿನಾಂಕ:12-02-2009ರ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 100 ಪ್ರತಿಗಳನ್ನು ಶಿಕ್ಷಣ ಇಲಾಖೆ, ಸೇವೆಗಳು-3 ಶಾಖೆಗೆ ಕಳುಹಿಸುವಂತೆ ಕೋರಲಾಗಿದೆ (ಅನುಮೋದನೆಗಾಗಿ ಕಳುಹಿಸಲಾಗಿದ್ದ ಮೂಲ ಪಠ್ಯವಸ್ತು [ಬೇಸಿಕ್ ಕೋರ್ಸ್ ಪುಟ-1 ರಿಂದ 212 ಹಾಗೂ ಟ್ಯಾಲಿ ಪುಟ-1 ರಿಂದ 41] ಹಾಗೂ [ಗ್ರಾಫಿಕ್ ಡಿಸೈನರ್ ಕೋರ್ಸ್ ಪುಟ-1 ರಿಂದ 106 ಹಾಗೂ ಕೊರೇಲ್ ಡ್ರಾ ಪುಟ-1 ರಿಂದ 96 ಮತ್ತು ಇಂಟರ್‌ನೆಟ್ ಪುಟ-1 ರಿಂದ 19 ರವರೆಗೆ] ಅನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

ಪ್ರತಿಗಳು:-

1) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು (ಅನುಮೋದನೆಗಾಗಿ ಕಳುಹಿಸಲಾಗಿದ್ದ ಮೂಲ ಪಠ್ಯವಸ್ತು [ಬೇಸಿಕ್ ಕೋರ್ಸ್ ಪುಟ-1 ರಿಂದ 212 ಹಾಗೂ ಟ್ಯಾಲಿ ಪುಟ-1 ರಿಂದ 41] ಹಾಗೂ [ಗ್ರಾಫಿಕ್ ಡಿಸೈನರ್ ಕೋರ್ಸ್ ಪುಟ-1 ರಿಂದ 106 ಹಾಗೂ ಕೊರೇಲ್ ಡ್ರಾ ಪುಟ-1 ರಿಂದ 96 ಮತ್ತು ಇಂಟರ್‌ನೆಟ್ ಪುಟ-1 ರಿಂದ 19 ರವರೆಗೆ] ಅನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ.
3) ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಮೈಸೂರು/ಬೆಳಗಾಂ/ಗುಲ್ಬರ್ಗಾ.
4) ನಿರ್ದೇಶಕರು, ಪ್ರೌಢ ಶಿಕ್ಷಣ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5) ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
6) ಶಿಕ್ಷಣ ಇಲಾಖೆಯ ಎಲ್ಲಾ ಅಧೀನ ಕಾರ್ಯದರ್ಶಿಗಳು ಮತ್ತು ಶಾಖಾಧಿಕಾರಿಗಳು.
7) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು.
8) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ)
9) ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಶಿಕ್ಷಣ ಇಲಾಖೆ.
10) ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಾಣಿಜ್ಯ ವಿದ್ಯಾಶಾಲೆಗಳ ಸಂಘ, ವಿಜಯಲಕ್ಷ್ಮಿ ಅಪಾರ್ಟ್‌ಮೆಂಟ್, ನಂ.20 ಜಿ-ಎ, 5ನೇ ಅಡ್ಡ ರಸ್ತೆ, ಮಹಮಡನ್ ಬ್ಲಾಕ್, ಮಲ್ಲೇಶ್ವರಂ, ಬೆಂಗಳೂರು-3.
11) ಹೆಚ್ಚುವರಿ/ಶಾಖಾ ರಕ್ಷಾ ಕಡತ.